**<u>ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ</u>**

**<u>ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ</u>**

**ಸಿಸಿ ಸಂಖ್ಯೆ: 364/2023**

ಚಾ.ಸಾ–09, ಪ್ರಾ.ಸಾ–07

| | | |
|---|---|---|
| ಹೆಸರು | : | ಚಂದ್ರು |
| ತಂದೆಯ ಹೆಸರು | : | ತಮ್ಮಯ್ಯಚಾರಿ |
| ವಯಸ್ಸು | : | 60 |
| ವೃತ್ತಿ | : | ಅಕ್ಕಸಾಲಿಗ |
| ವಾಸ | : | ತಿ. ನರಸೀಪುರ |

**<u>ದಿನಾಂಕ 22.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

[

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>**

ನಾನು ಕಳೆದ 45 ವರ್ಷಗಳಿಂದ ಅಕ್ಕಸಾಲಿಗನಾಗಿ ಕೆಲಸ ಮಾಡುತ್ತಿದ್ದೇನೆ.

ಕಳೆದ 3 ವರ್ಷಗಳ ಹಿಂದೆ ತಿ. ನರಸೀಪುರ ಪೊಲೀಸ್ ಠಾಣೆಗೆ ಪೊಲೀಸರು ನನ್ನನ್ನು ಚಿನ್ನ ಮತ್ತು ಬೆಳ್ಳಿ ಆಭರಣಗಳನ್ನು ಪರಿಶೀಲಿಸಲು ಕರೆದಿದ್ದು, ಆ ಪ್ರಕಾರ ನಾನು ಅಲ್ಲಿಗೆ ಹೋಗಿ ಅವುಗಳನ್ನು ಪರಿಶೀಲಿಸಿರುತ್ತೇನೆ. ಆ ಆಭರಣಗಳಲ್ಲಿ ತಾಳಿ, ಬಳೆಗಳು ಮತ್ತು ಇತರೆ ಆಭರಣಗಳು ಇದ್ದವು. ಆ ಆಭರಣಗಳು ಮೂಗೂರಿನ ಶ್ರೀ ತ್ರಿಪುರ ಸುಂದರಿ ದೇವರಿಗೆ ಸೇರಿದ ಆಭರಣಗಳು ಎಂದು ತಿಳಿದು ಬಂತು. ಆ ವೇಳೆಗೆ ಪೊಲೀಸರು ಪಂಚನಾಮ ಜರುಗಿಸಿಲ್ಲ.

**<u>ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ</u>**

**ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ದಿನಾಂಕ 19.07.2022 ರಂದು ಪೊಲೀಸರು ನನ್ನನ್ನು ಚಾಮರಾಜನಗರ ತಾಲ್ಲೂಕಿನ ಬಿಸಲವಾಡಿ ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಸದರಿ ಗ್ರಾಮದ ಚರ್ಚ್‌ನ ಹಿಂಭಾಗ ಶೆಡ್‌ನಲ್ಲಿ ಪೊಲೀಸರು ಆರೋಪಿತರನ್ನು ಹಿಡಿದು ಪಂಚನಾಮವನ್ನು ಜರುಗಿಸಿದರು ಎಂದರೆ ಸರಿಯಲ್ಲ. ಅಲ್ಲಿ ಪೊಲೀಸರು ಸಿಲೆಂಡರ್‌ಗಳು, ಗ್ಯಾಸ್ ಕಟ್ಟರ್‌ಗಳು, ನಗದು ಹಣ, ಮೋಟಾರ್ ಸೈಕಲ್‌ಗಳು, ಮೊಬೈಲ್‌ಗಳು, ಬೆಳ್ಳಿಯ ಆಭರಣಗಳು ಮತ್ತು ಇತರೆ ವಸ್ತುಗಳನ್ನು ಜಪ್ತಿಪಡಿಸಿದರು ಎಂದರೆ ಸರಿಯಲ್ಲ. ಆ ಆಭರಣಗಳನ್ನು ನಾನು ಸ್ಥಳದಲ್ಲಿಯೇ ತೂಕ ಮಾಡಿ ಪರಿಶೀಲಿಸಿರುತ್ತೇನೆ ಎಂದರೆ ಸರಿಯಲ್ಲ. ಮಧ್ಯಾಹ್ನ 3.45 ರಿಂದ ಸಂಜೆ 6.30 ಗಂಟೆ ಸಮಯದಲ್ಲಿ ಪೊಲೀಸರು ಪಂಚನಾಮವನ್ನು ಜರುಗಿಸಿದ್ದು, ನಾನು ಅದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ದಿನಾಂಕ 20.07.2022 ರಂದು ಸದರಿ ಬಿಸಲವಾಡಿ ಗ್ರಾಮದ ಚರ್ಚ್‌ನ ಬಳಿಯಿದ್ದ ಟೆಂಟ್‌ಗೆ ಹೋಗಲು ಪೊಲೀಸರು ನನ್ನನ್ನು ಕರೆಸಿದ್ದರು ಎಂದರೆ ಸರಿಯಲ್ಲ. ಸದರಿ ಟೆಂಟಿನಲ್ಲಿ ಆರೋಪಿತರಾದ ಕಬ್ಬಾಳು ಮತ್ತು ಮಂಜುರವರು ಇರಿಸಿದ್ದ ಚಿನ್ನದ ಆಭರಣಗಳನ್ನು ತೋರಿಸುವುದಾಗಿ ನಮಗೆ ಮತ್ತು ಪೊಲೀಸರಿಗೆ ಹೇಳಿದ್ದರು ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಆರೋಪಿತರು ಚಿನ್ನದ

ಆಭರಣಗಳನ್ನು ತೋರಿಸಿದ್ದು, ಆ ವೇಳೆಗೆ ನಾನು, ಪ್ರಾಸಾ-4, ಚಾಸಾ-8 ರವರು ಇದ್ದು, ಆ ಆಭರಣಗಳನ್ನು ನಾನು ಪರಿಶೀಲಿಸಿದ್ದು, ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 12.30 ಗಂಟೆ ಸಮಯದಲ್ಲಿ ಪೊಲೀಸರು ಪಂಚನಾಮವನ್ನು ಜರುಗಿಸಿದರು ಎಂದರೆ ಸರಿಯಲ್ಲ.

ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಶ್ರೀ ಎಂ.ಆರ್. ವಕೀಲರಿಂದ 1ನೇ ಆರೋಪಿತನ ಪರವಾಗಿ ಏನೂ ಇರುವುದಿಲ್ಲ.**

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ತಿ.ನರಸೀಪುರ**